ಶ್ರೀ ಬಿ.ಆರ್. ಯಾವಗಲ್: ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಾರೆ. ಕಳೆದ ಒಂದು ವರ್ಷದಿಂದ ಅಧ್ಯಯನ, ಸ್ಟಡಿ ಎಲ್ಲಾ ಆಗಿ ಬಹಳ ಪ್ರಪೋಸಲ್‌ಗಳು ಆಗಿರುತ್ತವೆ. ಒಂದು ಯೋಜನೆಗಳು ಒಂದು ಯೂನಿಟ್‌ಗಳು ಇವತ್ತು ಬರುತ್ತಿಲ್ಲ. ಅದಕ್ಕೆ ಬಹಳಷ್ಟು ಸಿಬ್ಬಂದಿ ಕೊರತೆ, SLAC ಮತ್ತು ಅನೇಕ ತೊಂದರೆಗಳಿಂದಾಗಿ ಅವುಗಳು ಹಾಗೆ ನಿಂತಿವೆ. ಅದಕ್ಕೆ ಏನಾದರೂ ಕ್ರಮವನ್ನು ಜರುಗಿಸಿದ್ದೀರಾ ಎನ್ನುವುದನ್ನು ಹೇಳಬೇಕು.

ಅಧ್ಯಕ್ಷರು : Specific ಆಗಿ ಕೇಳಿ.

ಶ್ರೀ ಹೆಚ್.ಕೆ. ಪಾಟೀಲ್ : ಬಹುಶಃ MVS scheme ನಲ್ಲಿ ಬಹಳಷ್ಟು ತೀವ್ರವಾಗಿ ಮತ್ತು ಜಾಗ್ರತೆಯಾಗಿ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನವನ್ನು ಪಟ್ಟಿದ್ದೇವೆ. ಅಲ್ಲಿ ಸ್ವಲ್ಪ ಪ್ರಮಾಣದಲ್ಲಿ ಯಶಸ್ಸು ಆಗಿದೆ. ಇನ್ನೂ ತೀವ್ರಗೊಳಿಸುವಂಥ ಎಲ್ಲಾ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಅಂಗನವಾಡಿ ಕಟ್ಟಡ

41(365) ಶ್ರೀ ರಾಜೀವ್.ಪಿ. (ಕುಡಚಿ) :– ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕಿನ ಕುಡಚಿ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿಗಳು ಸ್ವಂತ ಕಟ್ಟಡವಿಲ್ಲದೆ ಸಮುದಾಯಭವನ, ಶಾಲಾ ಕಟ್ಟಡ ಇತ್ಯಾದಿಗಳಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸ್ವಂತ ಕಟ್ಟಡವಿಲ್ಲದೆ ಇರುವ 109 ಅಂಗನವಾಡಿಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಇ) ಅಂಗನವಾಡಿ ಮಕ್ಕಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವ ಹಿತದೃಷ್ಟಿಯಿಂದ ಹೊಸ ಅಂಗನವಾಡಿ ಕಟ್ಟಡಗಳನ್ನು ಎಂದಿನಿಂದ ನಿರ್ಮಾಣ ಮಾಡಲಾಗುವುದು;

(ಈ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ತುರ್ತು ಕ್ರಮಗಳೇನು ?

ಶ್ರೀಮತಿ ಉಮಾಶ್ರೀ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) :–

(ಅ) ಕುಡುಚಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 109 ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

(ಆ) ಈ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 263 ಅಂಗನವಾಡಿ ಕೇಂದ್ರಗಳಿದ್ದು, ಇವುಗಳಲ್ಲಿ 154 ಕೇಂದ್ರಗಳು ಸ್ವಂತ ಕಟ್ಟಡದಲ್ಲಿ, 84 ಕೇಂದ್ರಗಳು ಸಮುದಾಯ ಭವನದಲ್ಲಿ, 4 ಕೇಂದ್ರಗಳು ಪಂಚಾಯತ್ ಕಟ್ಟಡದಲ್ಲಿ ಮತ್ತು 21 ಕೇಂದ್ರಗಳು ಶಾಲಾ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

ಸ್ವಂತ ಕಟ್ಟಡಗಳಿಲ್ಲದ 109 ಕೇಂದ್ರಗಳ ಪೈಕಿ 17 ಕೇಂದ್ರಗಳಿಗೆ ವಿವಿಧ ಯೋಜನೆಗಳಡಿ ಕಟ್ಟಡ ಮಂಜೂರಾಗಿದ್ದು, ಕಟ್ಟಡ ನಿರ್ಮಾಣ ವಿವಿಧ ಹಂತದಲ್ಲಿರುತ್ತವೆ. ಉಳಿದ ಅಂಗನವಾಡಿ ಕೇಂದ್ರಗಳಿಗೆ ಕಟ್ಟಡಗಳನ್ನು ಹಂತಹಂತವಾಗಿ ನಿರ್ಮಿಸಲಾಗುವುದು. ನಿರ್ಮಾಣ ಹಂತದಲ್ಲಿರುವ ಕಟ್ಟಡಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

(ಇ) ಸ್ವಂತ ಕಟ್ಟಡಗಳಿಲ್ಲದ ಅಂಗನವಾಡಿ ಕೇಂದ್ರಗಳಿಗೆ ಸರ್ಕಾರದ ವಿವಿಧ ಯೋಜನೆಗಳಾದ ಆರ್.ಐ.ಡಿ.ಎಫ್. ವಿಶೇಷ ಅಭಿವೃದ್ಧಿ ಯೋಜನೆ ಸುವರ್ಣ ಗ್ರಾಮ ಯೋಜನೆ. ಎಂ.ಎಸ್.ಡಿ.ಪಿ, ಬಿ.ಆರ್.ಜಿ.ಎಫ್ ಮತ್ತಿತರ ಯೋಜನೆಗಳಡಿಯಲ್ಲಿ ಅನುದಾನ ಲಭ್ಯತೆ ಮತ್ತು ನಿವೇಶನ ಲಭ್ಯತೆಗನುಗುಣವಾಗಿ ಕಟ್ಟಡಗಳನ್ನು ಹಂತಹಂತವಾಗಿ ನಿರ್ಮಿಸಲಾಗುತ್ತದೆ.

(ಈ) (ಅ) 2014–15 ನೇ ಸಾಲಿನಲ್ಲಿ ನಬಾರ್ಡ್ ಕಾಮಗಾರಿಗಳಡಿಯಲ್ಲಿ ರೂ. 41.95 ಕೋಟಿ ಅನುದಾನವನ್ನು ಒದಗಿಸಲಾಗಿದ್ದು 723 ಅಂಗನವಾಡಿ ಕಟ್ಟಡಗಳನ್ನು ಎಂ.ಎನ್.ಆರ್.ಇ.ಜಿ.ಎ. ಮತ್ತು ಕೇಂದ್ರ ಸಹಾಯದೊಂದಿಗೆ ನಿರ್ಮಿಸಲು ಕ್ರಿಯಾಯೋಜನೆ ಸಿದ್ಧಪಡಿಸಲಾಗಿದೆ. ಇದರಲ್ಲಿ ಬೆಳಗಾವಿ ಜಿಲ್ಲೆಯಲ್ಲಿ 80 ಕಟ್ಟಡಗಳನ್ನು ಮತ್ತು ಕುಡಚಿ ವಿಧಾನ ಸಭಾ ಕ್ಷೇತ್ರದಲ್ಲಿ 4 ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

(ಆ) 2014–15 ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕಾಗಿ ರೂ. 30.00 ಕೋಟಿ ಅನುದಾನ ಒದಗಿಸಲಾಗಿದ್ದು, 517 ಅಂಗನವಾಡಿ ಕಟ್ಟಡಗಳನ್ನು ಎಂ.ಎನ್.ಆರ್.ಇ.ಜಿ.ಎ ಮತ್ತು ಕೇಂದ್ರ ಸಹಾಯದೊಂದಿಗೆ ನಿರ್ಮಿಸಲು ಕ್ರಿಯಾಯೋಜನೆ ಸಿದ್ಧಪಡಿಸಲಾಗಿದೆ. ಇದರಲ್ಲಿ ಬೆಳಗಾವಿ ಜಿಲ್ಲೆಯಲ್ಲಿ 22 ಅಂಗನವಾಡಿ ಕಟ್ಟಡಗಳನ್ನು ಮತ್ತು ಕುಡಚಿ ವಿಧಾನಸಭಾ ಕ್ಷೇತ್ರದಲ್ಲಿ ಒಂದು ಕಟ್ಟಡ ನಿರ್ಮಿಸಲು ಉದ್ದೇಶಿಸಲಾಗಿದೆ.

ವಿಧಾನ ಸಭಾ ಸದಸ್ಯರಾದ ಶ್ರೀ. ಪಿ. ರಾಜೀವ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 365ಕ್ಕೆ ಅನುಬಂಧ

ಕುಡಚಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ನಿರ್ಮಾಣ ಹಂತದಲ್ಲಿರುವ ಕೇಂದ್ರಗಳ ಮಾಹಿತಿ

ಸಂ	ಗ್ರಾಮದ ಹೆಸರು	ಅಂಗನವಾಡಿ ಕೇಂದ್ರದ ಹೆಸರು	ಕಟ್ಟಡದ ಹಂತ	ಯೋಜನೆ ಹೆಸರು	ಮಂಜೂರಾದ ವರ್ಷ
1	ಆಲಖನೂರ	ಕಮತ್ ಕೋಡಿ	ಮುಕ್ತಾಯ ಹಂತ	ತಾಲೂಕ ಪಂಚಾಯತ ಅನುದಾನ	2013-14
2	ಪರಮಾನಂದವಾಡಿ	ಮುಲ್ಲಾ ಗಲ್ಲಿ	ಚೆಂಡರ ಹಂತ	RIDF-13	2011-12
3	ಸುಟ್ಟಟ್ಟಿ	ಜಾಂಬಾರ ಗಲ್ಲಿ	ಸ್ಲ್ಯಾಬ	ತಾಲೂಕ ಪಂಚಾಯತ ಅನುದಾನ	2013-14
4	ಯಬರಟ್ಟಿ	ಹಿರಿಯಾಳ ತೋಟ	ಕಿಟಕಿ ಲೆವಲ	ತಾಲೂಕ ಪಂಚಾಯತ ಅನುದಾನ	2013-14
5	ಯಲ್ಪಾರಟ್ಟಿ	ಸಿದ್ದೇಶ್ವರ ಗುಡಿ	ಚೆಂಡರ ಹಂತ	IRDF-13	2011-12
6	ಹಾರೂಗೇರಿ	ಹಾರೂಗೇರಿ ಕ್ರಾಸ	ನಿರ್ಮಾಣ ಏಜೆನ್ಸಿ ಗುರುತಿಸಿ ಕಾರ್ಯಾದೇಶ ನೀಡಲಾಗಿದೆ	ವಿಶೇಷ ಅಭಿವೃದ್ಧಿ ಯೋಜನೆ	2013-14
7	ಹಾರೂಗೇರಿ	ಬಾಬಾನಂದ ಮಠ	ಪ್ಲಿಂತ	ಜಿಲ್ಲಾ ಪಂಚಾಯತ ಅನುದಾನ	2013-14
8	ಹಾರೂಗೇರಿ	ಜಾತಗಾರ ಪ್ಲಾಟ	ಸ್ಲ್ಯಾಬ	ತಾಲೂಕ ಪಂಚಾಯತ ಅನುದಾನ	2013-14
9	ಹಾರೂಗೇರಿ	ವಿದ್ಯಾ ನಗರ	ಲಿಂಟಲ್	ತಾಲೂಕ ಪಂಚಾಯತ ಅನುದಾನ	2013-14
10	ಬೆಕ್ಕೇರಿ	ನನದಿ ತೋಟ	ಪಾಯಾ	ತಾಲೂಕ ಪಂಚಾಯತ ಅನುದಾನ	2013-14
11	ಬೆಕ್ಕೇರಿ	ಅಮೋಘಸಿದ್ದೇಶ್ವರ ಗುಡಿ	ಪಾಯಾ	ತಾಲೂಕ ಪಂಚಾಯತ ಅನುದಾನ	2013-14
12	ಪಾಲಬಾವಿ	ತೇಗೂರ ತೋಟ	ಸ್ಲ್ಯಾಬ	ತಾಲೂಕ ಪಂಚಾಯತ ಅನುದಾನ	2013-14
13	ಕಪ್ಪಲಗುದ್ದಿ	ಶಿಂಗಾಡಿ ತೋಟ	ಚೆಂಡರ ಹಂತ	RIDF-13	2011-12

14	ಸವಸುದ್ದಿ	ಬೆಳಗಲಿ ತೋಟ	ನಿರ್ಮಾಣ ಸಾಮಗ್ರಿ ತರಲಾಗಿದೆ.	ಜಿಲ್ಲಾ ಪಂಚಾಯತ ಅನುದಾನ	2013–14
15	ಯಬರಟ್ಟಿ	ಪಾಟೀಲ ತೋಟ	ನಿರ್ಮಾಣ ವಿಜೆನ್ಸಿ ಗುರುತಿಸಿ ಕಾರ್ಯಾದೇಶ ನೀಡಲಾಗಿದೆ	RIDF-19 1ನೇ ಹಂತ	2013–14
16	ಹಾರೂಗೇರಿ	ಹನುಮಾನ ಮಂದಿರ	ನಿರ್ಮಾಣ ವಿಜೆನ್ಸಿ ಗುರುತಿಸಿ ಕಾರ್ಯಾದೇಶ ನೀಡಲಾಗಿದೆ	RIDF-19 2ನೇ ಹಂತ ನರೇಗಾ	2013–14
17	ಕಟಕಬಾವಿ	ದಾವನಿ ತೋಟ	ನಿರ್ಮಾಣ ವಿಜೆನ್ಸಿ ಗುರುತಿಸಿ ಕಾರ್ಯಾದೇಶ ನೀಡಲಾಗಿದೆ	RIDF-19 2ನೇ ಹಂತ ನರೇಗಾ	2013–14

ಶ್ರೀ ರಾಜೀವ್ ಪಿ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಒಟ್ಟು 109 ಅಂಗನವಾಡಿ ಕಟ್ಟಡಗಳು ಇಲ್ಲ. ಈ ವರ್ಷ ಇವರು 4 ಅಂಗನವಾಡಿ ಕಟ್ಟಡಗಳನ್ನು ಮಾತ್ರ ಕೊಟ್ಟಿದ್ದೇವೆಂದು ಹೇಳುತ್ತಾರೆ. ಈ ವೇಗದಲ್ಲಿ ಹೋದರೆ 109 ಅಂಗನವಾಡಿ ಕಟ್ಟಡಗಳನ್ನು ಕಟ್ಟುವುದಕ್ಕೆ ಇನ್ನು 30 ವರ್ಷಗಳು ಬೇಕಾಗುತ್ತದೆ. ಈ ವೇಗದಲ್ಲಿ ಹೋದರೆ ಮಕ್ಕಳು ಮುದುಕರಾಗಿ ಬಿಡುತ್ತಾರೆ. ಕನಿಷ್ಠ 25 ಅಂಗನವಾಡಿ ಕಟ್ಟಡಗಳನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ಮನವಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀಮತಿ ಉಮಾಶ್ರೀ : ಮಾನ್ಯ ಅಧ್ಯಕ್ಷರೆ, ಬೆಳಗಾವಿ ಜಿಲ್ಲೆಗೆ 2013–14ನೇ ಸಾಲಿಗೆ 145 ಕಟ್ಟಡಗಳನ್ನು ಕೊಟ್ಟಿರುತ್ತೇವೆ. ಕುಡಚಿ ಕ್ಷೇತ್ರದಲ್ಲಿ ಈಗಾಗಲೇ 17 ಕಟ್ಟಡಗಳು ಪ್ರಗತಿಯಲ್ಲಿವೆ. ಅವರು 4 ಕಟ್ಟಡಗಳನ್ನು ಕೊಟ್ಟಿದ್ದಾರೆಂದು ಹೇಳಿದ್ದಾರೆ. ನಾವು ವಿವಿಧ ಯೋಜನೆ ಅಡಿಯಲ್ಲಿ 5 ಕಟ್ಟಡಗಳನ್ನು ಕೊಟ್ಟಿದ್ದೇವೆ. ನಾವು ಮಾನ್ಯ ಎನ್.ಕೆ. ಪಾಟೀಲ್ ರವರ ವರದಿ ಪ್ರಕಾರ ಅನುಷ್ಠಾನಗೊಳಿಸುತ್ತಿದ್ದೇವೆ. ಆ ಪ್ರಕಾರ ನಿವೇಶನ ಇತ್ಯಾದಿ ಎಲ್ಲವು ನಮಗೆ ಬೇಕಾಗುತ್ತದೆ. ನಿವೇಶನಗಳನ್ನು ತಾವು ಒದಗಿಸಿ ಕೊಟ್ಟರೆ ನಾನು ಅದನ್ನು ಪರಿಶೀಲನೆ ಮಾಡಿ ಮಾಡಿಸಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಅಂಗನವಾಡಿಗಳನ್ನು ಮರದ ಕೆಳಗಡೆ ಮಾಡುತ್ತಿದ್ದಾರೆ. ಅಂಗನವಾಡಿಗಳನ್ನು ಕೇಂದ್ರ ಸರ್ಕಾರ ಮಂಜೂರು ಮಾಡುತ್ತದೆ. ಕಟ್ಟಡಗಳನ್ನು ಇಡೀ ರಾಜ್ಯದಲ್ಲಿ ಒಂದೊಂದು ಕ್ಷೇತ್ರದಲ್ಲಿ 150–200 ರವರೆಗೆ ಕಟ್ಟಡಗಳನ್ನು ಕಟ್ಟಬೇಕಾದ ಪರಿಸ್ಥಿತಿ ಇದೆ. ಇದಕ್ಕೆ ಸಮಗ್ರವಾದ ಒಂದು ಯೋಜನೆಯನ್ನು ರೂಪಿಸಿ ಅದಕ್ಕೆ ಮನಸ್ಸು ಮಾಡಿದ್ದೀರಾ ಏನು ಎನ್ನುವುದನ್ನು ತಿಳಿಸಿ. 3–4 ಕೊಟ್ಟಿದ್ದೇವೆಂದರೆ ಎಲ್ಲಿ ಕಟ್ಟುತ್ತಾರೆ. ಸೈಟ್ ಬೇಕು ಎಂದರೆ ಇವತ್ತೆ ಬನ್ನಿ ಬರೆಸಿ ಕೊಡುತ್ತೇವೆ. ಮಾನ್ಯ ಸಚಿವರು ಮನಸ್ಸು ಮಾಡಿ ಒಂದು ಯೋಜನೆಯನ್ನು ತರುವುದು ಬಿಟ್ಟು, ಎಲ್ಲಾ ಕಡೆ ಅಕ್ಷರ ದಾಸೋಹ ಎಂದು ಕಟ್ಟಡವನ್ನು ಕಟ್ಟಲಿಲ್ಲವೆ ? ಯಾವುದಾದರೊಂದು ಯೋಜನೆಯಲ್ಲಿ ಮಕ್ಕಳು ಸರಿಯಾದ ರೀತಿಯಲ್ಲಿ ಕುಳಿತುಕೊಂಡು ಪಾಠ ಮಾಡುವಂತೆ ಮಾಡಿ. ನರೇಗಾ ಇರುವುದರಿಂದ ಅದನ್ನು ಇದಕ್ಕೆ ಉಪಯೋಗಿಸಿಕೊಳ್ಳಿ.

ಶ್ರೀಮತಿ ಉಮಾಶ್ರೀ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಎಲ್ಲಾ ರೀತಿಯ ಹಣ ನಮಗೆ ಯಾವ್ಯಾವುದರಲ್ಲಿ ಸಿಗುತ್ತದೆ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಯಿಂದ ಹಣ ಉಪಯೋಗಿಸಿಕೊಂಡು ಕಟ್ಟುತ್ತಿದ್ದೇವೆ. ನರೇಗಾ ಹಣ ಕೂಡ ಉಪಯೋಗಮಾಡಿಕೊಂಡು ಕಟ್ಟಡವನ್ನು ಕಟ್ಟುತ್ತಿದ್ದೇವೆ. ನಾವು ಸಹ ಇದರ ಪ್ರಯತ್ನದಲ್ಲಿದ್ದೇವೆ. 2012–13 ರಲ್ಲಿ 4.18 ಲಕ್ಷ ರೂ.ಗಳು ಇತ್ತು. ಜಸ್ಟಿಸ್ ಶ್ರೀ ಎನ್.ಕೆ. ಪಾಟೀಲ್‌ರವರ ವರದಿ ಬಂದ ಮೇಲೆ ನಮಗೆ ಇರುವಂಥ ಹಣದಲ್ಲಿ ನಾವು ರಿವೈಸ್ ಮಾಡಿದ್ದೇವೆ. ಮೊದಲು 9 ರಿಂದ 11 ಲಕ್ಷ ರೂ. ಗಳಿಗೆ ಆಯಿತು. ಈಗ 13 ಲಕ್ಷ ರೂ. ಗಳವರೆಗೆ ನಾವು ರಿವೈಸ್ ಮಾಡಿದ್ದೇವೆ. ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣ ಇನ್ನು ರಿವೈಸ್ ಆಗಿಲ್ಲ. ಇನ್ನು ಹೆಚ್ಚು ಅಂಗನವಾಡಿ ಕಟ್ಟಡ ನಿರ್ಮಾಣ ಆಗುವುದು ಅಗತ್ಯ ಇದೆ. ಅದರ ಬಗ್ಗೆ ನಾವು ಗಮನವನ್ನು ಹರಿಸುತ್ತಿದ್ದೇವೆ.

ಅಧ್ಯಕ್ಷರು : ಅವರು ಸಮಗ್ರವಾದ ಒಂದು ಕಾರ್ಯಕ್ರಮವನ್ನು ರೂಪಿಸಿ ಎಂದು ಕೇಳುತ್ತಿದ್ದಾರೆ.

ಶ್ರೀಮತಿ ಉಮಾಶ್ರೀ : ಅಂಗನವಾಡಿ ಕಟ್ಟಡಗಳ ಅಗತ್ಯತೆ ಇದೆ. ಅದರ ಕಡೆ ನಾವು ಗಮನವನ್ನು ಹರಿಸುತ್ತಿದ್ದೇವೆ. ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಏನಾದರೂ ಯೋಜನೆ ಇದೆಯಾ ಅದನ್ನು ಹೇಳಿ. ಮಾನ್ಯ ಮಂತ್ರಿಗಳೆ, ಗಮನ ಹರಿಸುತ್ತೇವೆ. ಪರಿಶೀಲಿಸುತ್ತೇವೆಂದು ಹೇಳುವುದನ್ನು ಬಿಡಿ.

ಶ್ರೀಮತಿ ಉಮಾಶ್ರೀ : ಖಂಡಿತವಾಗಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತೇವೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕಾಗುತ್ತದೆ. ಮಾನ್ಯ ಸಚಿವರಲ್ಲಿ ಕೇಳಿದರೆ ಪ್ರಯೋಜನವಾಗುವುದಿಲ್ಲ.

ಅಧ್ಯಕ್ಷರು : ಅವರು ಕೇಳಿರುವುದರಲ್ಲಿ ಅರ್ಥ ಇದೆ. ಈಗಿನ ಮಕ್ಕಳು ನಾವು ನೀವು ಇದ್ದ ರೀತಿ ಹಳೆ ಕಾಲದ ಮಕ್ಕಳಲ್ಲ. ಹೊಸ ಕಾಲದ ಮಕ್ಕಳಿಗೆ ಅಗತ್ಯ ಸೌಲಭ್ಯ ಬೇಕಾಗಿದೆ. ಒಂದು ಸಮಗ್ರವಾದಂತಹ ಯೋಜನೆ ತಯಾರು ಮಾಡಿ ಸಾಧ್ಯವಾದರೆ ನಿರ್ದಿಷ್ಟ ಅವಧಿಯಲ್ಲಿ ಎಲ್ಲಾ ಕಡೆ ಕಟ್ಟಡ ಕೊಡುವಂತಹ ಕಾರ್ಯಕ್ರಮಕ್ಕೆ ಒಂದು ರೂಪ ಕೊಡಿ.

ಶ್ರೀಮತಿ ಉಮಾಶ್ರೀ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಕಳೆದ ಸಾಲಿನಲ್ಲಿ ಕಟ್ಟಿರುವಂತಹ ಕಟ್ಟಡಗಳಿವೆ ಅವು ಕಡಿಮೆ ಅನುದಾನದಲ್ಲಿ ಕಟ್ಟಿರುವಂಥದ್ದು. ಈಗ ಸ್ವಲ್ಪ ಕಟ್ಟಡದ ರೇಟ್ ಜಾಸ್ತಿಯಾಗಿರುವುದರಿಂದ ಇನ್ನೂ ಹೆಚ್ಚು ಬೇಕು ಎಂದು ಕೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಈಗಾಗಲೇ ನಾನು ಚರ್ಚೆ ಮಾಡಿದ್ದೇನೆ. ಅವರ ಗಮನಕ್ಕೆ ಇದನ್ನು ತಂದು ಈ ಯೋಜನೆಯನ್ನು ಅಥವಾ ಹಣವನ್ನು ಹೆಚ್ಚಿಗೆ ಕೊಡುವುದರ ಬಗ್ಗೆ ಕೆಲಸ ಮಾಡುತ್ತೇನೆ.

ಅಧ್ಯಕ್ಷರು : ಎಷ್ಟು ಕಟ್ಟಡ ಬೇಕು, ಎಷ್ಟು ಹಣ ಬೇಕು, ಎನ್ನುವ ಮಾಹಿತಿಯನ್ನು ಇಟ್ಟುಕೊಂಡು ಮಾನ್ಯ ಮುಖ್ಯಮಂತ್ರಿಯವರ ಜೊತೆ ಚರ್ಚೆ ಮಾಡಿ.

ಶ್ರೀಮತಿ ಉಮಾಶ್ರೀ : ಆಯಿತು.

(ಗೊಂದಲ)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಮಾನ್ಯ ಮುಖ್ಯಮಂತ್ರಿಯವರು ಒಂದು ಮಾತನ್ನು ಹೇಳಲಿ. ಅಂಗನವಾಡಿಗಳದ್ದು ಎಲ್ಲಾ ಕಡೆ ಸಮಸ್ಯೆ ಇದೆ.

(ಗೊಂದಲ)

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಅಧ್ಯಕ್ಷರೆ, ಕೂಲಿ ಕಾರ್ಮಿಕರ ಮಕ್ಕಳು ಅಂಗನವಾಡಿಗೆ ಹೋಗತಕ್ಕಂಥವರು, ಎಲ್ಲೆಲ್ಲಿ ಸೈಟುಗಳು ಲಭ್ಯವಿದೆ ಅಲ್ಲಾದರು

ಕಟ್ಟಡಗಳನ್ನು ಕೊಡಲಿ. ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ತೀರ್ಮಾನ ಮಾಡಿ ಹೇಳಲಿ. ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ಏನೂ ಹೇಳುತ್ತಿಲ್ಲ. ತಾವೂ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡಬೇಕು ಎಂದು ಹೇಳುತ್ತಿದ್ದೀರಿ.

(ಗೊಂದಲ)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ಮಾತನಾಡಬೇಕು. ಅದು ತುಂಬಾ ಬಡ ಮಕ್ಕಳಿಗೆ ಇರುವುದು. ಬಡ ಮಕ್ಕಳ ಬಗ್ಗೆ ಯೋಚನೆ ಮಾಡಬೇಕು.

(ಗೊಂದಲ)

ಅಧ್ಯಕ್ಷರು : ಹೌದು ನಾನೂ ಕೂಡ ಬಡವರ ಮಕ್ಕಳು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೆ, ಹಳೆಮಕ್ಕಳು, ಹೊಸ ಮಕ್ಕಳು ಎಂದು ಇಲ್ಲ. ಎಲ್ಲಾ ಒಂದೇ ರೀತಿಯ ಮಕ್ಕಳು.

(ಗೊಂದಲ)

ಅಧ್ಯಕ್ಷರು : ನಿಮಗೆ ಗೊತ್ತಿಲ್ಲ. ನಾನು ನೋಡಿದ್ದೇನೆ. ಅಲ್ಲಿಗೆ ಬರುವ ಮಕ್ಕಳೆಲ್ಲಾ ಒಂದೇ ರೀತಿಯ dress ಹಾಕಿಕೊಂಡಿರುತ್ತಾರೆ.

(ಗೊಂದಲ)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಇಲ್ಲ ಸಾರ್. ಅಂಗನವಾಡಿಯಲ್ಲಿ ಹಿಂದೆ ಯಾವ ರೀತಿ dress ಇತ್ತು. ಇದೇ ರೀತಿ ಇದೆ. ನಾನು ನಮ್ಮ ಹಳ್ಳಿಯಲ್ಲಿ ನೋಡಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ಮಾತನಾಡಬೇಕು. ಇದು ಬಹಳ ಮುಖ್ಯವಾದದ್ದು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಪರಿಶೀಲನೆ ಮಾಡಿ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಮಂಕಾಳ ಸುಬ್ಬ ವೈದ್ಯರವರು ಮಾತನಾಡುವುದು.

ಮಕ್ಕಳ ಶಿಕ್ಷಣ ಕಾಯ್ದೆಯಡಿ ಪ್ರವೇಶ

42(325) ಶ್ರೀ ಮಂಕಾಳ ಸುಬ್ಬ ವೈದ್ಯ (ಭಟ್ಕಳ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–